(686)

ವಾರದ ಸಂಚಿಕೆ

Reg No. M 1299

Daily & Weekly

For All Kinds of Printing & Binding

The Satyavadi Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 27 ಸಂಚಿಕೆ 313] ಶನಿವಾರ 12—6—1943 [6 ಪೈ

ಅಪರ ರ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಸುವ ರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ ಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

ಪಾಂಟಲೇರಿಯ ಪತನವೇ ?

ಟ್ಯೂನಿಷಿಯಾಕ್ಕೂ ಸಿಸಲಿಗೂ ನಡುವೆ ಅಂದರೆ ಸಿಸಲಿಗೆ 60 ಮೈಲಿ ದೂರದಲ್ಲಿರುವ ಪಾಂಟೇಲೆರಿಯ ದ್ವೀಪವು ಮಿತ್ರರ ಕೈಗೆ ಇಷ್ಟು ಹೊತ್ತಿಗೆ ಸೇರಿರುವುದರಲ್ಲಿ ಏನೂ ಸಂದೇಹವಿಲ್ಲ ಇದು ಮಿತ್ರರ ವಶವಾದರೆ ಸಿಸಲಿಮೇಲೆ ಧಾಳಿ ಮಾಡಲು ಅನುಕೂಲವಾಗುವುದು ಅಲ್ಲದೆ ಮೆಡಿಟರೇನಿಯನ್ ಸಮುದ್ರದಲ್ಲಿ ಹಡಗುಗಳ ಸಂಚಾರಕ್ಕೂ ಅನುಕೂಲವೆನ್ನಬಹುದು. ಈ ದ್ವೀಪದಲ್ಲಿ ಜ್ವಾಲಾಮುಖಿಗಳ ಶ್ರೇಣಿ ಇರುವುದು ಮಂಟಗ್ನ ಜ್ವಾಲಾಮುಖಿಯು ಎತ್ತರ 2740 ಅಡಿ. ಈ ದ್ವೀಪದ ಜದರಂಮೈಲಿ 32, ಜನಸಂಖ್ಯೆ 10 ಸಾವಿರ ಇಲ್ಲಿ ಅಗಾಧವಾದ ವಿಮಾನ ನಿಲ್ದಾಣಗಳೂ ಸಬ್‌ಮೆರಿನ್ ನಿಲ್ದಾಣಗಳೂ ಇಟಲಿಯವರು ತಯಾರುಮಾಡಿಕೊಂಡಿದ್ದರು. ಇದು ಶತ್ರುಗಳ ಕೈಬಿಟ್ಟರೆ ಮಿತ್ರರಿಗೆ ಬಹಳ ಪ್ರಯೋಜನವುಂಟು.

ಡಿಫಿಕಲ್ಟೀಸ್ ಆಫ್ ಇಂಡಿಯಾ ರೂಲ್ ಮೇರೆ ತಕ್ಷೆಯಾವ ಲಾಯರುಗಳು ವಕೀಲರಾಗಿರಲು ಅನರ್ಹರಲ್ಲದೆಂದು ಕಲ್ಕತ್ತಾ ಹೈ ಕೋರ್ಟಿನವರು ತೀರ್ಮಾನ ಮಾಡಿರುತ್ತಾರೆ,

ಲಾಹೋರಿನಲ್ಲಿ ಸಿಕ್ಕರ ಒಂದು ಗುಂಪು ಪೋಲೀಸರ 15 ಗುಡಿಸಲುಗಳಿಗೆ ಬೆಂಕಿಹಾಕಿ ಸುಟ್ಟರು, ಒಬ್ಬನು ದಸ್ತಗಿರಿಯಾಗಿರುತ್ತಾನೆ.

ವಿಶೇಷ ವರ್ತಮಾನ

ಸೂರತ್ ಸವಿಾಪದಲ್ಲಿ ಭಲಗಲ್‌ಸಲ್ಲಿ ರಹದಾರಿಯಲ್ಲದೆ ಒಂದು ಮೆರವಣಿಗೆ ನಡಿಸಿದ್ದರಿಂದ 9 ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. ಅಲ್ಲಿ ಇಬ್ಬರು ಸ್ತ್ರೀರು ಮಿಠಾಯಿ ಅಂಗಡಿಯಲ್ಲಿ ಪಿಕಿಟಿಂಗ್ ಮಾಡಿದ್ದರಿಂದ ದಸ್ತಗಿರಿಯಾದರು.

ಆಟ್ಟೂ ದ್ವೀಪವನ್ನು ಜಪಾನರು ಸೋಲಲು ಅಮೇರಿಕಾದವರು ಒಲವಾದ ನೌಕೆಯನ್ನು ಪೆಸಿಫಿಕ್ಕನಲ್ಲಿ ಇಟ್ಟಿರುವರು.

1943ರಲ್ಲಿ ಅಮೇರಿಕಾದಲ್ಲಿ ವಿಮಾನ ತಯಾರುಮಾಡಲು 20ಬಿ ಡಿಲಿಯರ್ ಡಾಲರ್ ಮಂಜೂರಾಗಿದೆ.

ಹಾಲೆಂಡಿನಲ್ಲಿದ್ದ ಎಲ್ಲಾ ಬಿಷಪ್‌ಗಳನ್ನು ಜರ್ಮನಿಗೆ ಕೆಲಸಕ್ಕೆ ಕರೆದುಕೊಂಡು ಹೋದದ್ದು ಹಾಲೆಂಡ್ ಜನರಿಗೆ ವ್ಯಥೆಯನ್ನುಂಟುಮಾಡಿದೆ.

ಏಪ್ರಿಲ್ ತಿಂಗಳಲ್ಲಿ ಭಾರತದಲ್ಲಿ 14184 ಜನರು ಹೊಸದಾಗಿ ರೇಡಿಯೋ ಲೈಸನ್ಸ್‌ನ್ನು ತೆಗೆದುಕೊಂಡರು ಈಗ ಹಾಲಿ ಲೈಸೆನ್ಸ್‌ದಾರರು 168 ಸಾವಿರ ಇರುವರು.

ಸೂರತ್‌ನಲ್ಲಿ ಯಾವ ವರ್ತಕರೂ 25 ಮಣಕ್ಕಿಂತ ಹೆಚ್ಚು ಹತ್ತಿಬೀಜವನ್ನು ಇಟ್ಟುಕೊಂಡಿರಬಾರದೆಂದು ಸರ್ಕಾರಿ ಆಜ್ಞೆಯಾಗಿದೆ.

ಲಾಂಪಡ್ಯೂಸ್ ದ್ವೀಪದ ಗತಿಯೇನು ?

ಲಾಂಪಡ್ಯೂಸ್ ದ್ವೀಪವು ಇಟಲಿಗೆ ಸೇರಿದೆ. ಇದು ಟ್ಯುನಿಷಿಯಾಕ್ಕೆ 88 ಮೈಲಿ ಪೂರ್ವದಲ್ಲಿದೆ. ಇದರ ಉದ್ದ 7 ಮೈಲಿ ಅಗಲ 2 ಮೈಲಿ ಜನಸಂಖ್ಯೆ 2500. ಪಾಂಟೆಲೇರಿಯ ಪತನವಾದ ಮೇಲೆ ಇದನ್ನು ಮಿತ್ರರು ತೆಲವು ಸಿವಿಷಗಳ ಧಾಳಿಯಲ್ಲಿ ತಮ್ಮ ವಶಪಡಿಸಿಕೊಳ್ಳಲು ಸಾಧ್ಯವು. ಪಾಂಟಲೇರಿಯ ಪತನವಾಗಿರುವುದರಿಂದ ಈ ದ್ವೀಪವೂ ಮಿತ್ರರವಾಗಿರಬಹುದೆಂದು ಹೇಳಬಹುದು.

ಅನಾಥರು

ಹತ್ತು, ಹನ್ನೆರಡು ವರ್ಷದ ನೂರಾರು ಮಕ್ಕಳು ಈಗ ನಾರ್ವೆಯ ಸೋವೋಗ್ಯಾಡ್ ವೋಲಿಸ್‌ಗೆ ಒಂದಿನೆ. ಇವುಗಳ ಮಾತಾಪಿತೃಗಳು ಜರ್ಮನಿಯಲ್ಲಿ ಕೂಲಿಲಿಮಾಡಲು ಹೋಗಿರುತ್ತಾರೆ ಈ ಮಕ್ಕಳನ್ನು ಹೆಣ್ಣುಮಗುವಿಗೆ 4 ಅಥವಾ 5 ಮಾರ್ಕು, ಗಂಡಿಗೆ 6 ಮಾರ್ಕ್ ಈರೀತಿಯಲ್ಲಿ ಮಾರಾಟವಾಗುತ್ತಿವೆ. ಬಿಕರಿಯಾಗದ ಮಗುವನ್ನು ಸ್ಲೆಚ್ ನದಿಯಲ್ಲಿ ಮುಳಿಗಿಸುವರಂತೆ. ಈ ದೃಶ್ಯವನ್ನು ಕಣ್ಣಾರ ನೋಡಿದವರು ಹೇಳುವರು.

ವರ್ತಮಾನ ಸಂಗ್ರಹ

—o—

ಬ್ರೆಜಿಲಿನ ಒಂದು ಡಿಸ್ಟ್ರಿಕ್ಟಿನಲ್ಲಿ ವರ್ಷಸರ ಸಂಖ್ಯೆ ಹೆಚ್ಚಾಗಿರುವ ಕಡೆ ಜರ್ಮನರು ಪ್ಯಾರಜೂಟುಗಳಲ್ಲಿ ಜರ್ಮನ್ ಸೇನೆ ಇಳಿಸಿ ರಾಜ್ಯವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವ ಯೋಚನೆ ಮಾಡಿದ್ದು ಪತ್ತೆಯಾಗಿ 24 ಮಂದಿ ಜರ್ಮನರು ಈಗ ವಿಚಾರಣೆಯಲ್ಲಿರುವರು.

ಮಿ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣ ಮಿ.ರೂಸವೆಲ್ಟರು ಪಟ್ಸ್‌ಬರ್ಗ್‌ನಲ್ಲಿ ಆಹಾರ ಸಮ್ಮೇಳನದಲ್ಲಿ ಮಾಡಿದ ಭಾಷಣಗಳ ಒಂದು ಮಾತನ್ನೂ ಜರ್ಮನ್ ಪತ್ರಿಕೆಕಾರರು ಮುದ್ರಿಸಿಲ್ಲ.

ಬೊಗಾಳಾದಲ್ಲಿ ರಾಜಪ್ರಭು ಖೈದಿಗಳಿಗೆ ಕೊಡುತ್ತಿರುವ ಆಹಾರಕ್ಕಿಂತ ಎರಡರಷ್ಟು ಹೆಚ್ಚಾಗಿ ಕೊಡಲು ಸರ್ಕಾರಿ ಆಜ್ಞೆಯಾಗಿದೆ.

ಜಪಾನಿಯರನ್ನು ವಂಚಿಸಲು ಅಮೇರಿಕಾದವರು ಅಟ್ಟಾದ್ವೀಪದಲ್ಲಿ ಕೆರಿ ಎಲೆಯನ್ನು ಕಾಗದದಲ್ಲಿ ಮಾಡಿಹಾಕಿದರಂತೆ ಈ ಎಲೆಯನ್ನು ಜಪಾನಿಯರು ಸೋಡಿದ ಮಾತ್ರದಿಂದ ಅಸುಭವವಾಗುವುದಂತೆ. ಕಾಗದದಲ್ಲಿ ಮಾಡಿದ್ದನ್ನು ನಿಜವಾದುಲೆಯೆಂದು ಜಪಾನಿಗಳು ಭ್ರಾಂತರಾದರು.

ಶ್ರೀ ಓಂ ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಕೇಸರವಾದ ಪದಾರ್ಥವೂ ಸೇರಿಲ್ಲ ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್.

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ವರ್ತಮಾನ ಸಂಗ್ರಹ

—೦—

ಬ್ರಿಟಿಷ್ ಪದ್ಧತಿಗಳು ರಷ್ಯಾದವರಿಗೆ ಬೇಗನೆ ತಿಳಿಯಲು ರಷ್ಯಾದಲ್ಲಿ ಕ್ಯೂಬಿಷಿ ವೊನಲ್ಲಿ ಬ್ರಿಟಿಷ್ಕಿ ಸೋಯುಜ್‌ನಿಕ್ ಎಂಬ ಪತ್ರಿಕೆಯನ್ನು ಪ್ರಕಟಿಸುವುದು. ಲಂಡನ್‌ನಿಂದ ಕ್ಯೂಬಿಷಿವೊಗೆ 4000 ಮೈಲಿ ದೂರವಿದೆ. ಚಿತ್ರಗಳನ್ನು ಮಾ ಸ್ಕೋಗೆ ರೇಡಿಯೋ ಮಾಡುವುದು. ಅಲ್ಲಿಂದ ವಿಮಾನದಲ್ಲಿ ಪ್ರಕಟ ಸ್ಥಳಕ್ಕೆ ತಿಳಿಸುವುದು. ವಿಷಯವನ್ನು ರೇಡಿಯೋದಲ್ಲಿ ತಿಳಿಸುವುದು ಅಲ್ಲಿ ಇದನ್ನೆಲ್ಲಾ ಒಟ್ಟುಗೂಡಿಸಿ ಪ್ರಿಂಟ್ ಮಾಡುವುದು. ರಷ್ಯಾದಲ್ಲಿ ಈಗ ಪ್ರಿಂಟ್ ಕೆಲಸಗಾರರು ಸೈನ್ಯದಲ್ಲಿ ಸೇರಿರುವುದರಿಂದ ಈ ಏರ್ಪಾಡನ್ನು ಮಾಡಿಸಿದೆವು.

೦ ೦

ಜರ್ಮನಿಯನ್ನು ಬಾಂಬು ಧಾಳಿಯಿಂದ ನಾಶಮಾಡಿ ಗೆಲ್ಲಲು ಮಿಕ್ಕರಿಗೆ ಆಗುವುದಿಲ್ಲ ಈಗ ಯೂರೋಪ್ ರಾಜಧಾನಿ ಬರ್ಲಿನ್. ಬರ್ಲಿನ್‌ಮೇಲೆ ಪ್ರತಿದಿವಸವೂ 3 ಭಾರಿ ವಿಮಾನ ಕಳಿಸಬೇಕು ಆಗ ಜರ್ಮನಿಯು ಕಣ್ಣು ಬಿಡುವುದು ಎಂದು ಅಮೇರಿಕಾ ಪ್ರಸಿದ್ಧ ಗ್ರಂಥ ಕರ್ತನಾದ ಮಿ|| ಮಿಲಿಯಿ ಂಷಿರರು ಲಂಡನ್ ಪತ್ರಿಕೆಯೊಂದರಲ್ಲಿ ಒದರಿರುವರು.

೦ ೦

ಒಂದು ಮಿಲಿಯನ್ ಗೋಧಿ ಚೀಲವನ್ನು ಸಿಂಧ್ ಸರ್ಕಾರವು ಕೊಂಡು, ತಮಗೆ ಬೇಕಾದಷ್ಟು ಇಟ್ಟುಕೊಂಡು, ಮುಂಬಾಯಿಗೂ, ಸಿಂಹಳದ್ವೀಪಕ್ಕೂ ಕಳುಹಿಸಿರುತ್ತೆ.

೦ ೦

ಅಲ್ಜೀರಿಯಾದಲ್ಲಿ ಜನರಲ್ ಡಿಗಾಲ್ ಮಾತನಾಡುತ್ತಾ ಇತರರ ಸಹಾಯದಿಂದ ಫ್ರಾನ್ಸ್ ಬಿಡಗಡೆಯಾಗಬೇಕಾದ್ದಿಲ್ಲ, ಆದೂ ಫ್ರಾನ್ಸ್‌ನ ಮುಖ್ಯ ಸ್ನೇಹಿತರಿಂದ ಫ್ರಾನ್ಸ್‌ಗೆ ಧನಸಹಾಯ ಬೇಡ ಇತರ ಸಹಾಯವಿಲ್ಲದೆ ನಾವು ನಮ್ಮ ರಾಜ್ಯವನ್ನು ಗೆಲ್ಲುತ್ತೇವೆ. ಮಾರ್ಷಲ್ ಪೆಟೇನ್ ವಿಷಯವಾಗಿ ಇವರು ಗುರುಭಾವನೆಯಿಂದ ಮಾತನಾಡುವರೆಂದು ತಿಳಿದಿರುವುದು. ಫ್ರೆಂಚ್ ಜನರಿಗೆ ತಾವು ಏನು ಮಾಡಬೇಕೋ ಅದು ಗೊತ್ತಿದೆ ಎಂದರು ಅಲ್‌ಜೀರಿಯಾದಲ್ಲಿ ಫ್ರೆಂಚರು ಮೊದಲನೆ ವಿಾಟ್ಗಿಂಗ್ ನಡೆಯಿತು. ಜನರಲ್ ಡಿಗಾಲ್ ಜೀರೋ ಭಾಗವಹಿಸಿದ್ದನು.

ಕಾರಣಾಂತರಗಳಿಂದ ನಾಳೆಯದಿನ ಪತ್ರಿಕೆಯು ಪ್ರಕಟವಾಗುವುದಿಲ್ಲ.

ಪ್ರಜಾಪ್ರತಿನಿಧಿ ಸಭೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಂಗಳೂರು ಜೂ 11

10 ನೇ ದಿನದ ಪ್ರಜಾಪ್ರತಿನಿಧಿ ಸಭೆಯು ಇವತ್ತು 12 ಘಂಟೆಗೆ ರಾಜಮಂತ್ರಪ್ರವೀಣ ಶ್ರೀಮಾನ್ ಆನಂತರಾಮರ್ಕರವರ ಘನ ಅಧ್ಯಕ್ಷತೆಯಲ್ಲಿ ಜರುಗಿತು. ಉಪಮಂತ್ರಿಗಳು ಬಂದಿದ್ದರು.

ಪ್ರಶ್ನೋತ್ತರಗಳ ತರುವಾಯ, ಆಹಾರ ಸದಾರ್ಥಗಳ ವಿಚಾರ ಚರ್ಚೆ ದಿನವೆಲ್ಲಾ ನಡೆಯಿತು.

ಪುರಸ್ಕಾರದವರು ಸಲಹೆಗಳನ್ನು ಸೂಚಿಸಬೇಕೆಂದು ತಿಳಿಸಿದರು. ಅನೇಕ ಸದಸ್ಯರು ಮಾತಾಡಿದರು.

ಸಭೆಯು ಅಭಿಪ್ರಾಯದಲ್ಲಿ ಸರಕಾರದವರು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ವರ್ತಕರ ಕೈವಾಡ ಬಗೆ—ಹರಿಸಬೇಕು. ಹೊರಗಡೆ ಸಾಗಿಸುವುದಕ್ಕೆ ಅವಕಾಶವಿಲ್ಲದಂತೆ ಸುಗ್ರೀವಾಜ್ಞೆ ಆಗಬೇಕು. ಒಳಗಡೆ ಸಾಗಿಸುವುದಕ್ಕೆ ಮಾತ್ರ ಬೇಡ. ರೈತನು ಸಾಲಗಾರನಾಗಿರುವದು ನಿಜ. ದುಡ್ಡು ಮಾಡುವದಕ್ಕೆ ಇದೇ ಸುಸಮಯವಾಗಿದೆ. ಹೊರಗಡೆ ಹೇಳ ತೀರಿದ ರೀತಿ ಸಾಗಿಹೋಗುತ್ತಿವೆ. ಸರಕಾರದ ಸಿಬ್ಬಂದಿ ಹೆಚ್ಚುಮಾಡಿ ನಿಷ್ಕರ್ಷಪಟ ದಕ್ಷತೆ, ಪ್ರಾಮಾಣಿಕತೆಯಿಂದ ನಡೆಯುವಂತೆ ನೋಡಬೇಕು. ರೈಲು ಮಾರ್ಗವಾಗಿಯೂ ಸಾಗಿಹೋಗುತ್ತಿದೆ, ಮುಖ್ಯವಾಗಿ ಭೂಪಾಳಂ ಚಂದ್ರಶೇಖರಯ್ಯ, ಸೀತಾರಾಮಶಾಸ್ತ್ರಿ, ಶಿದ್ದಲಿಂಗಶೆಟ್ಟಿ ಮುಂತಾದ ಅನೇಕ ಸದಸ್ಯರು ಮಾತಾಡಿದರು. ಸಭೆಯು 5 ಕ್ಕೆ ಮುಗಿಯಿತು.

ಈದಿನ ಬೆಳಿಗ್ಗೆ 8-30 ಘಂಟೆಯಿಂದ 12 ರವರಿಗೆ ನಡೆಯಿತು.

ಇವತ್ತು ಬೆಳಿಗ್ಗೆ ಭದ್ರಾವತಿಯ, ಜಿನ್ನಾಪುರದ 3000 ಪ್ರಜೆಗಳನ್ನು ಅಸ್ಥಳ ಬಿಟ್ಟುಕೊಟ್ಟು ಬೇರೆಕಡೆ ಹೋಗಿ ವಾಸ ಮಾಡಬೇಕೆಂದು ಸರಕಾರದವರು ಸೂಚಿಸಿರುವ ಬಗ್ಗೆ ಕೂಡಲೆಂದು ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಅವಸರದ ಠರಾವನ್ನು ಸೂಚಿಸಿದರು. ಇದು ಸರಕಾರದಲ್ಲಿ ಬರಲಿಲ್ಲಾ ಎಂದು ದಿವಾನರಿಂದ ನಿರಾಕರಿಸಲ್ಪಟ್ಟಿತು.

ಪ್ರಜಾಪ್ರತಿನಿಧಿ ಸಭೆಯು ಒಡ್ಡೆಟ್ ಅಧಿವೇಶನವು ಈ ದಿವಸ ಮುಕ್ತಾಯವಾಯಿತು.

ಈವಾರದ ಕಥೆ—

ಸ್ವಯಂಕೃತಾಪರಾಧ

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದದ್ದು)

ಮೂರ್ತಿಯು ಇವ ಭೀಮಸಂದ್ರಕ್ಕೆ ಹೋಗುವ ದನಗಳೇ ಎಂದುಯೋಚಿಸಿ ತೊಡಗಿದನು. ಇವುಗಳ ಹಿಂದೆಯೇ ನಾನೂ ಮೆಲ್ಲಗೆ ನಡೆದು ಭೀಮಸಂದ್ರವನ್ನು ಸೇರಿಕೊಳ್ಳಬಹುದಲ್ಲವೇ ? ಆದರೆ ಇವು ಭೀಮಸಂದ್ರಕ್ಕೆ ಹೋಗುತ್ತವೆಯೇ ಎಂಬುದನ್ನು ಮೊದಲು ತಿಳಿಯಬೇಕು. ಯಾರನ್ನು ಕೇಳುವುದು ? ಈ ವೇಳೆಯಲ್ಲಿ ಇಬ್ಬಿಗರ ಕಾಟದಲ್ಲಿ ಇಲ್ಲಿ ತಿರುಗತಕ್ಕವರಾರು ಎಂದು ಯೋಚಿಸುತ್ತಿದ್ದನು.

ಹಿಂದೆ ಬರುತ್ತಲಿದ್ದ ಪಶುಪಾಲಕನು, ಅಂಗರೇಕು, ರುಮಾಲು, ಪಾಜಾಮು ಬೂಟ್ಸು, ಮಿಣಿಮಿಣಿಗುಟ್ಟುವ ಕನ್ನಡಕ, ಗಡಿಯಾರದ ಸರಪಣಿ ಮುಂತಾದ್ದನ್ನು ಧಾರಣೆ ಮಾಡಿರತಕ್ಕೆ ನಾರಾಯಣ ಮೂರ್ತಿಯನ್ನು ದೊಡ್ಡ ಹುದ್ದೇದಾರನೆಂದು ತಿಳಿದುಕೊಂಡು ಸಮೀಪಕ್ಕೆ ಒಂದು ಭಯಭಕ್ತಿಯಿಂದ 'ಬುದ್ಧಿ, ಅಡ್ಡಬಿದ್ದೆ ; ನಾನು ಕರಣೀಕರ ಮನೆ ದನಕಾಯುವವನು. ಈ ಕಗ್ಗತ್ತಲೆಯಲ್ಲಿ ಒಬ್ಬೊಂಟಿಗರಾಗಿ ಏಕೆ ಕುಳಿತಿದ್ದೀರಿ ಒಬ್ಬಿ ; ಇಬ್ಬಗಳ ಕಾಟ, ಕೂರತಕ್ಕ ಸ್ಥಳವಲ್ಲ ಎಂದನು. ಮತ್ತೂ ಈ ರೀತಿಯಲ್ಲಿ ಹೇಳತೊಡಗಿದನು— ಇಬ್ಬಬರುವ ಹೊತ್ತಾಯಿತು. ಎಲ್ಲಿ ದನಗಳ ಮೇಲೆ ಬಳುತ್ತದೋ ಎಂಬ ಭಯವೇ ಭಯವಾಗಿದೆ ಎಷ್ಟ ಅಟ್ಟಿದರೂ ಈ ಹಾಳು ಗಬ್ಬದ ಎಮ್ಮೆ ನಡೆಯಲಾರದು. ಎಲಾ ಎಲಾ ದರಿದ್ದಿಲ್ಲರೂ ಅರಣ್ಯ ಹೊಲಕ್ಕೆ ನುಗ್ಗಿದವು ; ಎಲ್ಲಿ ದೊಡ್ಡಿಗೆ ಅಟ್ಟುತ್ತಾರೋ ಕಾಣೆನಲ್ಲ ; ಇನ್ನೇನು ಗತಿ. ಈ ಗಬ್ಬದ ಎಮ್ಮೆಯು ನಿಧಾನವಾಗಿ ಬರಲಿ ತಡವಾಡುವುದಕ್ಕೆ ಆಗುವುದಿಲ್ಲ, ದನಗಳನ್ನು ಊರು ಕಡೆಗೆ ತಿರುಗಿಸುತ್ತೇನೆ ಎಂದು ತೆರಳುವಲ್ಲಿ ಈ ಮಾತುಗಳನ್ನು ಕೇಳಿ ಮೂರ್ತಿಯು ಸಂತೋಷಗೊಂಡವನಾಗಿ ಗಬ್ಬದ ಎಮ್ಮೆಯಂತೆ ಮೆಲ್ಲಮೆಲ್ಲಗೆ ನಡೆದು ಕರಣೀಕರ ಮನೆಯನ್ನು ಸೇರತಕ್ಕದ್ದು, ಕರಣೀಕರೇ ನಮ್ಮ ಮಾವ. ಇನ್ನೇನು ಸರಿಯಾದ ಸಹಾಯವೇ ದೊರೆತಂತಾಯಿತಲ್ಲ. ಮೆಲ್ಲಮೆಲ್ಲಗೆ ತಡವರಿಸಿ ಆ ಎಮ್ಮೆಯ ಬಾಲವನ್ನು ಗೊತ್ತುಮಾಡಿಕೊಂಡು ಉಪಾಯವಾಗಿ ಹಿಡಿದು ಇದು ಜೊತೆಯಲ್ಲಿ ನಡೆದುಕೊಂಡುಬೋಗಿ ಮಾವನ ಮನೆಯನ್ನು ಸೇರಿಕೊಳ್ಳಬೇಕೆಂದು ಕೊಂಡನು ಮೂರ್ತಿ.

ಮೂರ್ತಿಯು ಮತ್ತೂ ಈ ರೀತಿ ಹೇಳಿಕೊಳ್ಳತೊಡಗಿದನು— ಸರ್ವಶಕ್ತನಾದ ದೇವರೇ ! ಯಾರಿಗೆ ಯಾವ ಸಮಯದಲ್ಲಿ ಹೇಗೆ ಸಹಾಯ ಮಾಡಿದರೆ ಕಷ್ಟ ನಿವಾರಣೆಯಾಗುತ್ತದೆಂಬುದನ್ನು ನೀನೊಬ್ಬನೇ ಬಲ್ಲೆ. ಕಣ್ಣು ಕಾಣದ ಕುರುಡನಿಗೆ ನಡೆಯಲಾಗದ ಎಮ್ಮೆಯು ಸಹಾಯ. ಈ ಸಮಯದಲ್ಲಿ ಇದಕ್ಕಿಂತಲೂ ಹೆಚ್ಚಾದ ಸಹಾಯವುಂಟೆ ನಿಧಿನಿಕ್ಷೇಪಗಳು ದೊರೆತಿದ್ದರೂ ಅಲಂಕಾರಕ್ಕೆಂದು ಸುನ್ನತಿಸಭೆ ಪ್ರಾಂತಿಪಿದ್ದು 'ಸ್ಪೆಕ್ಟಿಕಲ್ಸ್' ಹಾಕಿಕೊಳ್ಳುವುದನ್ನು ಅಭ್ಯಾಸ ಮಾಡಿ ಸರ್ವೇಂದ್ರಿಯಗಳಿಗೂ ಪ್ರಧಾನವಾದ ಕಣ್ಣನ್ನು ಹಾಳುಮಾಡಿಕೊಂಡು ಹಲುಬಾಡುತ್ತಿದ್ದ ಈ ಕರಣೀಕನಿಗೆ ಈ ಸಮಯದಲ್ಲಿ ನಿಕ್ಷೇಪಗಳು ದೊರೆತಿದ್ದರೂ ಸಂತೋಷವಾಗುತ್ತಿರಲಿಲ್ಲ. ಎಮ್ಮೆಯು ಈ ಸಮಯದಲ್ಲಿ ನಿಧಿನಿಕ್ಷೇಪಕ್ಕಿಂತಲೂ ಹೆಚ್ಚು.

ನಮ್ಮ ಆಫೀಸರು ಕೆಲಸದಲ್ಲಿ ಸ್ವಲ್ಪ ಅಶ್ರದ್ಧೆ ಕಂಡರೂ ಎಮ್ಮೇಕೋಣ ಎಂದು ಸಂಬೋಧಿಸುತ್ತಿದ್ದರು. ಈ ಮಾತನ್ನು ಕೇಳುತ್ತಲೇ ನನಗೆ ಎಷ್ಟೋ ಕೋಪ ಬರುತ್ತಿತ್ತು. ಆ ಮಾತಿಗೆ ಇನ್ನುವರೆಗೆ ಅರ್ಥವಾಗುತ್ತಿರಲಿಲ್ಲ. ಈಗ ಅರ್ಥವಾಯಿತು (ಅಲಂಕಾರೋಹಿ ನಾರೀಣಾ ಕ್ಷ್ಮಾಹಿ ಪುರುಷಸ್ಯತೆ). ಹೆಂಗಸಿಗಾಗಲೀ ಗಂಡಸಿಗಾಗಲೀ ಕ್ಷಮೆಯೇ ದೊಡ್ಡ ಭೂಷಣ ಈ ಗುಣವು ಎಮ್ಮೆಯಲ್ಲಿ ಸಂಪೂರ್ಣವಾಗಿರುವುದರಿಂದ ಎಮ್ಮೆಯು ಕಾಡುಮೃಗವಾದರೂ ಅದು ಗೌರವಿಸಲ್ಪಡುತ್ತಲಿದೆ ; ನೀನೂ ಸಮಾಧಾನದಿಂದ ನಡೆಯುವಿಕೆಯನ್ನು ಅಭ್ಯಾಸ ಮಾಡು, ಅದರಿಂದ ಪ್ರಯೋಜನವುಂಟು, ಎಂದು ಬುದ್ಧಿ ಕಲಿಸುವದಕ್ಕಾಗಿ ಅವರು ಆ ರೀತಿ ಹೇಳುತ್ತಿದ್ದರೇ ಹೊರತು ಮತ್ತೆ ಬೇರೆ ಅಲ್ಲಾ. ಇನ್ನು ಎಮ್ಮೆ ಕೋಣ ಎಂದು ಎಷ್ಟ ಗದರಿಕೊಂಡರೂ ಅಷ್ಟು ಸಂತೋಷನೇ ಸರಿ.

(ಮುಂದುವರಿಯುವುದು.)

ವಾರ್ತಾತರಂಗ

ಸ್ವಿಡ್ಜರ್ಲಂಡಿನೂ ಬಟೇವಿಗೂ ಮಧ್ಯೆ ಇರುವ ಪ್ರಸಿದ್ಧವಾದ ಸೆಂಟ್ ಗೋವರ್ ಕಣಿವೆಯು ಸಿಡಿತದಿಂದ ಹಾಳಾಗಿದೆಯೆಂದು ವರ್ತಮಾನ ಬಂದಿದೆ.

ಈಗ ಭಾರತದಲ್ಲಿ 40 ಸಾವಿರ ನಿರಾಶ್ರಿತರಿರುವರು ಮತ್ತೆ 11 ಸಾವಿರ ಮಂದಿ ಬರುವರಾಗಿರುವರು.

ರಷ್ಯಾ ರಣರಂಗದಲ್ಲಿ ಜರ್ಮನಿಯವರಿಗೆ 3 ತಿಂಗಳಲ್ಲಿ 5000 ವಿಮಾನ ನಷ್ಟವಾಗಿರುವುದಂತೆ.

ರಷ್ಯಾದ ಎರಡನೇ ಸಾಲವು 24 ಗಂಟೆಯೊಳಗಾಗಿ ತಾವು ಕೇಳಿದ್ದಕ್ಕಿಂತ ತೇಕಡ 20 ಕ್ಕಿಂತ ಹೆಚ್ಚಾಗಿ ವಸೂಲಾಗಿದೆ.

ಮದರಾಸು ಪಟ್ಟಣದಲ್ಲಿ ಸರ್ಕಾರವರು ಅಕ್ಕಿಗೆ ಏನೂ ಕೊರತೆಯಿಲ್ಲ ಎನ್ನುತ್ತಾರೆ. ಇದರೆ ಯಾವ ಅಂಗಡಿಯಲ್ಲಿ ನೋಡಿದರೂ ಅಕ್ಕಿ ಇಲ್ಲದೆ ಜನರು ಮನೆಗೆ ಹೋಗುತ್ತಿದ್ದಾರೆ !

ಮ್ಯಾಡಂ ಚಿಯಾಂಗ್ ಕೈಷೇಕರು ಜೂ॥ 15 ಕ್ಕೆ ಕೆನಡಾಕ್ಕೆ ಬಂದು, 3 ದಿವಸ ತಂಗುವರು, ಆಗ ಅಲ್ಲಿನ ಪಾರ್ಲಿಮೆಂಟಿನಲ್ಲಿ ಮಾತಾಡುವರು.

ಭಯಗ್ರಾಂತರಾಗಿ ಜರ್ಮನಿಯ ಭಾರಿ ವಿಮಾನ ಪಡೆಗಳು ಇತರ ರಣರಂಗದಿಂದ ಮೆಡಿಟರೇನಿಯನ್ ಕಡೆ ಜಮಾವಣೆಯಾಗುತ್ತಿರುವರು.

1941 ರಿಂದ ಪ್ರಸಿದ್ಧ ಮಿಲಿಟರಿ ವ್ಯಾಖ್ಯಾನಕಾರನಾದ ಲೆಫ್ಟಂಟ್ ಜನರಲ ಡಿಟ್‌ಮಾರನು ಪ್ರತಿವಾರವೂ ಜರ್ಮನಿಯ ವಾರ್ತೆಯನ್ನು ಜರ್ಮನ್ ಆಕಾಶವಾಣಿಯಲ್ಲಿ ಹೇಳುತ್ತಿದ್ದನು. ಈಗ ಆತನ ಭಾಷಣ ನಿಂತಿದೆ. ಕಾರಣ ?

ವಿಡ್ನಾಪುರದಲ್ಲಾದ ಹಾವಳಿಗೆ ಬಂಗಾಳ ಸರಕಾರವು ಮತ್ತೆ ಒಂದು ಕೋಟಿ ರೂಪಾಯಿ ಕೊಟ್ಟಿದೆ.

ಬಾಂಡಲೆಯ ಸುತ್ತಮುತ್ತ ಬ್ರಿಟಿಷ್ ವಿಮಾನಗಳು ಧಾಳಿ ಮಾಡಿ ಜಪಾನೀಯರಿಗೆ ವಿಶೇಷ ನಷ್ಟಮಾಡಿದವು.

ಮಿರೇಜ್ ಸ್ಟೇಷನ್ನಿಗೂ ಕರಾಚ್ ಸ್ಟೇಷನ್ನಿಗೂ ಮಧ್ಯೆ ಎಂ. ಎಸ್. ಎಂ ರೈಲ್ವೆ ಸ್ಪೆಷಲ್ ರೈಲು ನೌಕರರಿಗೆ ಸಂಬಳ ಬಟವಾಡೆ ಮಾಡಲು 15 ಸಾವಿರ ರೂಪಾಯಿ ತುಂಬಿಕೊಂಡು ಹೋಗುತ್ತಿತ್ತು. ಕಳ್ಳರು ಮುತ್ತಿ ಹಣವನ್ನು ಲೂಟಿ ಮಾಡಿಕೊಂಡು ಹೋದರು.

1941 ರಲ್ಲಿ ಸಿಂಗಪೂರಿನ ಬಳಿ ಬ್ರಿಟಿಷ್ ಭಾರಿ ನೌಕೆಯಾದ ರಿಪಲ್ಸನ್ನು ಮುಳುಗಿಸಿದ್ದರಷ್ಟೆ. ಇದನ್ನು ನೀರಿನಿಂದ ಮೇಲಕ್ಕೆ ಎತ್ತಲು ಏರ್ಪಾಡಾಗಿದೆ.

ಅಮೇರಿಕಾದಲ್ಲಾದ 1 ವಾರದ ಕಲ್ಲಿಜ್ಜಲು ಮುಷ್ಕರದಿಂದ 11 ಮಿಲಿಯ ಮಣ ಕಲ್ಲಿಜ್ಜಲು ಗಣಿಯಿಂದ ತೆಗೆಯಲಾಗಲಿಲ್ಲ

ಭಾರತದ ವೈಸರಾಯಿ ಪದವಿ ಯಾರಿಗೆ ಸಿಕ್ಕುತ್ತೋ ಅದು ಇನ್ನೂ ಪ್ರಕಟಿಸಿಲ್ಲ. ಮಿ॥ ಅಂಥೋನಿ ಈಡರ್‌ರವರಿಗೆ ಆಗಬಹುದೆಂದು ಲಂಡನ್ ಪತ್ರಿಕೆಗಳು ಹೇಳುತ್ತವೆ

ಕಳೆದ ಏಪ್ರಿಲ್ ನೀದ ಜಪಾನಿಯರ ಬಾಂಬುಗಳು ಬಿದ್ದು ಭಾರತದಲ್ಲಿ 816 ಮಂದಿ ಸತ್ತರು, 878 ಮಂದಿ ಗಾಯಗೊಂಡರು. ಬಂಗಾಳ, ಅಸ್ಸಾಂ ಮದರಾಸು, ತ್ರಿಪುರ ಮಣಿಪುರಗಳಲ್ಲಿ ಮಾತ್ರ ವಿಮಾನ ಧಾಳಿಯಾಯಿತು.

ಫೆಡರಲ್ ಕೋರ್ಟು ಹೊಸ ಛೀಫ್ ಜಸ್ಟಿಸರು ತಮ್ಮ ಕೆಲಸದ ಮೇಲೆ ಹಾಜರಾದರು.

ಮುತ್ರಸಕ್ಷದವರು ಕ್ರೀಟ್ ದ್ವೀಪವನ್ನು ಮುತ್ತುವರೆಂದು ರೋಂ ಆಕಾಶವಾಣಿಯಿಂದ ತಿಳಿಯಬರುತ್ತದೆ

ಟ್ಯುನಿಷಿಯಾ ತೀರದಲ್ಲಿ ವಿಮಾನ ಪತ್ರದವರು ಹೇರಳವಾಗಿ ನೌಕೆಯನ್ನೂ ವಿಮಾನವನ್ನೂ ಜಖಮಾಡಿಸುತ್ತಿರುತ್ತಾರಂತೆ.

ಜನರಲ್ ಡಿಗಾಲ್ ಮತ್ತು ಜನರಲ್ ಜಿರೋ ಇವರು ಮುಂದೆ ಯಾವ ರೀತಿ ಫ್ರಾನ್ಸ್ ಯುದ್ಧ ನಡೆಯಬೇಕೆನ್ನುವದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಿರುವರು,

ನಾವು ರಷ್ಯಾದ ಸಂಗಡ ಸಖ್ಯ ಬೆಳೆಸಿದ್ದು ನನಗೆ ಅಧಿಕ ಸ್ಯಮಾಣದಲ್ಲಿ ಸಹಾಯವಾಯಿತೆಂದು ಮಿ॥ ಪಾಲಂ ವಿಂಟರ್‌ಟನ್ನರು ಮಾಸ್ಕೋದಿಂದ ಆಕಾಶವಾಣಿಯಲ್ಲಿ ಮಾತನಾಡಿದರು.

ರಷ್ಯಾದ ಸರಕಾರಿ ಪದ್ಧತಿ ಮತ್ತು ಕಮ್ಯೂನಿಜಂ ಪದ್ಧತಿಯನ್ನು ಐರಿಷ್ ಕೂಲಿಗಾರರು ಅನುಸರಿಸುವದು ಸರಿಯಾದದ್ದಲ್ಲವೆಂದು ಐರಿಷ್ ಸ್ಥಳೀಯ ಮಂತ್ರಿಯವರು ಹೇಳಿರುತ್ತಾರೆ

ಒರ್ವಾ ಯುದ್ಧವು ಕೊನೆಗೊಂಡಿತು. ಮಳೆ ಪ್ರಾರಂಭವಾಯಿತು, ಜಪಾನೀಯರು ಬಾರತದ ಮೇಲೆ ಧಾಳಿ ಮಾಡುವುದು ನಿಂತಿತು. ಇನ್ನು ಭಾರತೀಯರು ಮುಂದಿನ ಯುದ್ಧಕ್ಕೆ ಸೇನೆ ತಯಾರು ಮಾಡಿಕೊಳ್ಳುವದಕ್ಕೂ ಮದ್ದುಗುಂಡು ಸಿದ್ಧಮಾಡಿಕೊಳ್ಳುವದಕ್ಕೂ ಅವಕಾಶ ಸಿಕ್ಕಿತು, ಎಂದು ಪತ್ರಿಕೆಯು ತಿಳಿಸುತ್ತದೆ.

ಆರ್. ಎ. ಎಫ್. ವಿಮಾನ ಧಾಳಿಯಿಂದ ಜರ್ಮನಿಯಲ್ಲಿ 2 ಮೈಲ್ ಸ್ಕ್ವೇರ್ ಅಗ್ನಿ ಪಾಲಾಯಿತು ಒಂದು ರೈಲ್ವೆ ಇಂಜಿನ್ ನೆಲಕ್ಕೆ ಉರುಳಿತು ಇನ್ನು 5 ಕ್ಕೆ ಪೂರಾ ಜಖಂ ಆಗಿ ಕೆಲಸಕ್ಕೆ ಬಾರದಂತಾಗಿದೆ.

ಂ ಂ

ಸ್ವೀಡನ್ನಿನಲ್ಲಿರತಕ್ಕ ರಿಜರ್ವ್ ಸೇನೆಗಳಿಗೆಲ್ಲಾ ಯುದ್ಧಸಿದ್ಧರಾಗಬೇಕೆಂದು ಆಜ್ಞೆಯಾಗಿದೆ,

ಂ ಂ

ಭಾರತದಿಂದ ಒರ್ವಾ ನೇಲೆ ಧಾಳಿ ಮಾಡುವ ಆರ್. ಎ. ಎಫ್. ವಿಮಾನ ಕಾರನು 10 ಲಕ್ಷ ಪೌಂಡು ಬಾಂಬನ್ನು ಸುರಿದು, 1 ಸಾವಿರ ಸಾರೆ ಒಮ್ಮಾದ ಮೇಲೆ ವಿಮಾನದಲ್ಲಿ ಹೋಗಿದ್ದನಂತೆ.

ಂ ಂ

ಪೋರ್ಚುಗಲ್ಲಿನಿಂದ 10 ಪೌಂಡು ಬೆಲೆ ಬಾಳುವ ವಜ್ರವನ್ನು ಸುಯಾದ ರಹದಾರಿಯಿಲ್ಲದೆ ಒಬ್ಬ ಜರ್ಮನಿಯವನು ಸಾಗಿಸುತ್ತಿರುವಾಗ ಪತ್ತೆಯಾಗಿ ದಸ್ತಗಿರಿಯಾದನು.

ಂ ಂ

ಅಮೆರಿಕಾ ವೈವಾಸಿಕರು ಹೆಚ್ಚು ಮಂದಿ ಇಂಗ್ಲೆಂಡಿಗೆ ಬಂದಿಳಿದಿರುವರು. ಚೀನಾಕ್ಕೂ ಅಮೇರಿಕಾ ವಿಮಾನ ಹೆಚ್ಚಾಗಿ ಬಂದಿವೆ.

ಂ ಂ

ಮಿ॥ ವಿ. ಡಿ. ಸವಾರ್ಕರರು 60 ನೇ ವರ್ಷಾಂತಿಯಲ್ಲಿ ಬೊಂಬಾಯಿನಲ್ಲಿನ ಮಹಾ ಜನರು 51 ಸಾವಿರ ರೂಪಾಯಿಗಳನ್ನು ಸರ್ ಆರ್. ಪಿ. ಪರಾಂಜಪೆಯವರ ಹಸ್ತ ಕೊಟ್ಟರು.

ಂ ಂ

ತಿರುವಾಂಕೂರಿನಲ್ಲಿ ಸುಮಾರು 100 ಮಂದಿ ಸರ್ಕಾರಿ ಉದ್ಯೋಗಸ್ಥರನ್ನು ವಜಾ ಮಾಡಿರುತ್ತಾರೆ ಇವರು ಲಂಚ ಮುಂತಾದವನ್ನು ತೆಗೆದುಕೊಂಡು ಸರ್ಕಾರಿ ಉದ್ಯೋಗವನ್ನು ನಡೆಸುತ್ತಿದ್ದರಂತೆ.

ಂ ಂ

ಮದರಾಸಿನಲ್ಲಿ ಈಚೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜಸ್ಟಿಸ್ ಪಾರ್ಟಿಯ ಉಮೇದುವಾರರು ನಿಂತಿದ್ದರಷ್ಟೆ. ಕಾಂಗ್ರೆಸ್ಸಿನವರಿಗೆ ಜಯವು ಒಂದಕ್ಕೆ ನಾಲ್ಕರಂತೆ ಆಯಿತು. ಇದರಿಂದ ದೇಶವು ಯಾವ ಕಡೆ ಕೂಗುತ್ತಿದೆ ಎಂಬುದು ಗೊತ್ತಾಗುವುದು. ಸರಕಾರದವರು ಬಹಳ ತಿಂಗಳು ವರ್ಷದಿಂದ ತಪ್ಪಿಸುತ್ತಿರುವ ಸೆಂಟ್ರಲ್ ಅಸೆಂಬ್ಲಿಯ ಚುನಾವಣೆಯನ್ನು ನಡೆಸಕೂಡದೆಂದು ಎಲ್ಲರೂ ಕೇಳುತ್ತಾರೆ.

ಚೈನಾದಲ್ಲಿನ ಅಮೆರಿಕ ವಿಮಾನಗಳು ಇಂಡೋ-ಚೈನಾದಲ್ಲಿ ಧಾಳಿ ನಡೆಸಿರೇವಿನಲ್ಲಿದ್ದ ಅನೇಕ ಸಣ್ಣ ಸಣ್ಣ ನೌಕೆಗಳನ್ನು ನಾಶಮಾಡಿದವು

ಂ ಂ

ಲಕ್ನೋ ಬಳಿ ಹಿಂಡರಾನ್ನಿನಲ್ಲಿ ಒಂದು ಕಳ್ಳರ ಗುಂಪನ್ನು ಪತ್ತೇಮಾಡಲು ಹೋದ ಒಬ್ಬ ಸಬ್ ಇನ್‌ಸ್ಪೆಕ್ಟರನ್ನು ಕಳ್ಳರು ಕೊಂದುಹಾಕಿದರು.

ಂ ಂ

ಶತ್ರುಗಳು ವಿಷವಾಯುವನ್ನು ಉಪಯೋಗಿಸಲು ಸಿದ್ಧರಾಗುತ್ತಿದ್ದಾರೆಂದೂ ಹಾಗೆ ಮಾಡಿದಲ್ಲಿ ತಾವು ಅವರಿಗಿಂತ ಹೆಚ್ಚಾಗಿ ಉಪಯೋಗಿಸುವುವೆಂದೂ ಮಿ॥ ರೂಸ್ವೆಲ್ಟರು ಹೇಳಿರುತ್ತಾರೆ.

ಂ ಂ

ಬೊಂಬಾಯಿನಲ್ಲಿ ಯಾರೂ 25 ಮಣಕ್ಕಿಂತ ಹೆಚ್ಚಾಗಿ ಸಕ್ಕರೆಯನ್ನು ದಾಸ್ತಾನು ಮಾಡಿದ್ದರೂ ಅದನ್ನೆಲ್ಲಾ ಸರ್ಕಾರದ ವಶಕ್ಕೆ ತೆಗೆದುಕೊಂಡಿರುತ್ತಾರೆ.

ಂ ಂ

ಅಮೇರಿಕಾದ ಸೇನಾನಾಯಕನೇ ಯೂರೋಪು ಮುತ್ತಿಗೆಗೆ ಮುಖ್ಯಾಧಿಕಾರಿಯಾಗಿರುವನೆಂದು ಗೊತ್ತಾಗಿದೆ.

ಂ ಂ

ಮಿ॥ ಚರ್ಚಿಲರು ಪ್ರಯಾಣ ಮಾಡಿದ ಹಡಗಿನಲ್ಲಿ ಸುಮಾರು 400 ಜರ್ಮನ್ ಯುದ್ಧ ಕೈದಿಗಳು ಅಮೇರಿಕಾಕ್ಕೆ ಪ್ರಯಾಣ ಮಾಡಿದರೆಂದು ಈಗ ಗೊತ್ತಾಗಿದೆ.

ಂ ಂ

ಬಲ್ಗೇರಿಯಾದಲ್ಲಿದ್ದ ಯಹೂದ್ಯರ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಂಡರು.

ಂ ಂ

ಟೋಕಿಯೋ ಮೇಲೆ ಬಾಂಬು ಹಾಕಬೇಕೆಂದು ಹವಾಯ್ ದ್ವೀಪದಲ್ಲಿರುವ 2 ಸಾವಿರ ಜಪಾನೀ ಪ್ರಜೆಗಳು ಅಮೇರಿಕಾ ಸರಕಾರಕ್ಕೆ 10 ಸಾವಿರ ಡಾಲರ್ ಕೊಟ್ಟಿರುತ್ತಾರೆ.

ಂ ಂ

ಈಗ ತಾನು ಸಹಾಯ ಮಾಡ್ನುವು ದಾಗಿ ಹಿಟ್ಲರ್ ಮುಸೋಲಿನಿಗೆ ಭರವಸೆ ಕೊಟ್ಟನಂತೆ !

ಂ ಂ

ಅಮೇರಿಕಾದಲ್ಲಿ ಈ ವರ್ಷ ಸಾವಿರಾರು ವಿಮಾನಗಳನ್ನು ಕಟ್ಟುತ್ತೇವೆಂದು ಕರ್ನಲ್ ನಾಕ್ಸರು ಹೇಳುತ್ತಾರೆ,

ಂ

ಗಂಟೂರಿನಲ್ಲಿ ಸ್ತ್ರೀಯೆರಿಗಾಗಿ ಒಂದು ಕಾಲೇಜನ್ನು ವಿರ್ಮಿಸಲು ಸರ್ಕಾರದವರು 50 ಸಾವಿರ ರೂಪಾಯಿಯನ್ನು ಮಂಜೂರ್ ಮಾಡಿದ್ದಾರೆ.

ವಾರ್ತಾತರಂಗ

ಕಲಕತ್ತಾ ಹೈಕೋರ್ಟಿನಲ್ಲಿ ಡಿಫೆನ್ಸ್ ಆಕ್ಟ್ 26 ರ ಮೇಲೆ ಸಿಬಂಧ್ದಲ್ಲಿದ್ದವರು ತಮ್ಮನ್ನು ಬಿಡುಗಡೆ ಮಾಡಬೇಕೆಂದು ಮನವಿಮಾಡಿ ಕೊಂಡಿದ್ದರು. ಇವರನ್ನೆಲ್ಲಾ ಇಬ್ಬರು ಜಡ್ಜಿಗಳು ಪುಲಾಸೆಮಾಡಿ ಸೆಂಟ್ರಲ್ ಲೆಜಿಸಲೇಚರ್‌ರವರು ಮಾಡಿದ ಖಾನೂನನ್ನು ತಿದ್ದಲು ಗವರ್ನಲ್ ಜನರಲ್‌ರವರಿಗೆ ಅಧಿಕಾರವನ್ನು ಪಾರ್ಲಿಮೆಂಟ್ ಕೊಟ್ಟಿಲ್ಲವೆಂದು ಹೇಳಿಬಿಟ್ಟರು. 3 ನೇ ಜಡ್ಜಿಗಳು ಈ ಇಬ್ಬರ ನ್ಯಾಯವನ್ನು ಒಪ್ಪಲಿಲ್ಲ. ಇವರನ್ನೆಲ್ಲಾ ಕೋರ್ಟಿನಿಂದ ಬಿಡುಗಡೆಯಾದ ಮೇಲೆ 1818 ನೇ ರೆಗ್ಯುಲೇಷನ್ 3 ನೇ ಪ್ರಕಾರ ಎಲ್ಲರೂ ಡಸ್ತಗಿರಿಯಾದರು.

ಓರಿಸದೇಶಿಯ ಸಂಸ್ಥಾನಗಳಲ್ಲಿ ಅಕ್ಕಿ ನಿರ್ಬಂಧವನ್ನು ತೆಗೆದುಹಾಕಿದ್ದರಿಂದ ಅಕ್ಕಿಯನ್ನು ಬ್ರಿಟಿಷ್ ಗಡಿ ರೈಲ್ವೆಸ್ಟೇಷನ್‌ನಲ್ಲಿ ಒಂದು ಚೀಲ ಅಕ್ಕಿಗೆ 35 ರೂ. ಆಗುವುದು. ಬಂಗಾಳಾದ ಮಿಡ್ನಾಪುರದಿಂದ ಜನರು ಬಾಲಸೂರಿಗೆ ರೈಲಿನಲ್ಲಿ ಟಿಕೇಟ್ ತೆಗೆದುಕೊಳ್ಳದೆ ಪ್ರಯಾಣಮಾಡಿ ಅಕ್ಕಿಯನ್ನು ಕೊಳ್ಳಲು ತಂಡ ತಂಡವಾಗಿ ಬರುತ್ತಿರುವದು. ಬಂಗಾಳದಿಂದ ವರ್ತಕರೂ ಅಕ್ಕಿಯನ್ನು ಕೊಳ್ಳಲ್ಲು ಬರುತ್ತಿರುವರಂತೆ

ಲಿಬರ್ಟಿ ಪತ್ರಿಕೆಯ ಬಾತ್ಮಿದಾರರಾದ ಮಿಸೆಸ್ ಎರಿಕಮ್ಯಾನ್ ಈಗ ಲಂಡನ್ನಿಗೆ ಬಂದಿರುತ್ತಾಳೆ. ಈಕೆಯು ಯುದ್ಧಕಾಲದಲ್ಲಿ ಅಮೇರಿಕಾವು ಭಾರತ ವಿಷಯದಲ್ಲಿ ಏನು ಮಾಡಲು ಆಗುವುದಿಲ್ಲ, ಯುದ್ಧ ಪೂರ್ವ ಏನು ಬೇಕಾದರೂ ಮಾಡಬಹುದಾಗಿತ್ತು: ವಂದೆಸ ವರ್ಷದ ಚುನಾವಣೆಯಲ್ಲಿ ಮಿ|| ವೆಂಡಲ್ ವಿಲ್ಕಿಯವರು ಪ್ರೆಸಿಡೆಂಟು ಸ್ಥಾನಕ್ಕೆ ಬಂದಾಗ ಅವರೂ ಸಹಾ ಯುದ್ಧಕಾಲದಲ್ಲಿ ಕೈಹಾಕಲು ಆಗುವುದೇ ಇಲ್ಲ, ಎಂದು ಹೇಳಿದರು.

ಅಮೇರಿಕಾ ಲೇಖನರಾದ ಲೂಯಿ ಫಿಷರ್‌ರವರು ಭಾರತ ಇಲ್ಲವೇ ಲೇಖನವನ್ನು ಪ್ರಕಟಿಸುವದಕ್ಕೆ ಪೂರ್ವ ಸರ್ಕಾರಿ ಆಜ್ಞೆಯನು ವಿಮರ್ಶೆಮಾಡಿ ನಂತರ ಪ್ರಕಟಿಸಬೇಕೆಂದು ಆಜ್ಞೆಯಾಗಿದೆ.

ಗ್ರೀಸ್ ರಾಜಧಾನಿಯಾದ ಏಥೆನ್ಸ್‌ನಲ್ಲಿ ಹೊಟ್ಟೆಗಿಲ್ಲದೆ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಸತ್ತಿರುವರೆಂದು ತಿಳಿಯಬಂದಿದೆ.

ಮಿ|| ಚರ್ಚಿಲರು ಅಮೇರಿಕಾ ಪ್ರವಾಸ ಮುಗಿಸಿ, ಆಲ್ಜೀರಿಸ್‌ಗೆ ಬಂದು, ಅಲ್ಲಿಗೆ ಬಂದಿದ್ದ ಮಿ|| ಈಡನ್ನು ನೋಡಿ ಜನರಲ್ ವೆಸ್ಟ್‌ಪೋವರನ್ನು ಭೇಟಿಮಾಡಿ ಟ್ಯೂನಿಸಿನ್ ರಣರಂಗವನ್ನು ನೋಡಿ, ಜಿರೋ ಡಿಗಾಲ್ ಸತ್ಕಾರ ಕೂಟದಲ್ಲಿ ತಾವೂ ಭಾಗಿಯಾಗಿದ್ದು ಶುಕ್ರವಾರ ಲಂಡನ್‌ಗೆ ಸುರಕ್ಷಿತವಾಗಿ ತಲಪಿದರು.

ಈಜಿಪ್ಟಿನಲ್ಲಿ ಧಾನ್ಯ ಶೇಖರಣೆ ಅಧಿಕ ಲಾಭಸಂಪಾದನೆಗೆ ನಿಷೇಧಮಾಡಿರುವರ. ಕೆಲವ್ಯಕಡೆ ಶೋಧನೆ ನಡಿಸಿ 2 ಲಕ್ಷ ಪೌಂಡುಗಳಷ್ಟು ಬಚ್ಚಿಟ್ಟಿದ್ದ ಪದಾರ್ಥಗಳನ್ನು ಸರ್ಕಾರದವರು ತಮ್ಮ ವಶಮಾಡಿಕೊಂಡರು.

ಮದರಾಸಿನಲ್ಲಿ ಕಾಗದದ ಅಭಾವದಿಂದ ಎಸ್. ಎಸ್. ಎಲ್. ಸಿ. ಯ 1943 ನೇ ಇಸವಿಯ ಪುಸ್ತಕಗಳೇ 1944 ಕ್ಕೂ ಇರತಕ್ಕದ್ದೆಂದು ಆಜ್ಞೆಯಾಗಿದೆ.

ಸುಮಾರು 70 ಬ್ರಿಟಿಷ್ ವಹಿಳೆಯವರು ಭಾರತದ ಸ್ಟೇಟ್ ಸೆಕ್ರಟರಿಯವರಿಗೆ ಒಂದು ಪತ್ರ ಬರೆದು ಕಾಂಗ್ರೆಸ್ ನಾಯಕರೊಂದಿಗೆ ಸಂಬಂಧ ಬೆಳಿಸಿ, ಅವರನ್ನು ಬಿಡುಗಡೆಮಾಡಿ ಇದರಿಂದ ಸರ್ವರಿಗೂ ಕ್ಷೇಮವೆಂದು ಒರೆದಿರುತ್ತಾರೆ. 100 ಶತ್ರುಗಳನ್ನು ಕೊಲೆಮಾಡಿದರು.

ಈಗ ಅಮೇರಿಕ ವಿಮಾನಗಳು ಚೀನಾಕ್ಕೆ ಒಂದಿದ್ದರಿಂದ ಚೀನಾಕ್ಕೆ ರಕ್ಷಣೆ ದೊರತಿತೆಂದೂ, ಜಾಂಕಿಂಗ್ ಮುತ್ತಿಗೆ ತಪ್ಪಿತೆಂದೂ ಚೀನಿ ವಿದೇಶಾಂಗ ಮಂತ್ರಿ ಡಾ|| ಟಿ ವಿ. ಸೂಂಗ್‌ರವರು ಮಿ|| ರೂಸವೆಲ್ಟರಿಗೆ ಒಂದು ವರದಿ ಕಳಿಸಿರುತ್ತಾರೆ.

ಫ್ರೆಂಚ್ ಇತಿಹಾಸದಲ್ಲಿ ಜೂನ್ 3 ಪ್ರಸಿದ್ಧಿಯಾದ ದಿವಸ ಈದಿವಸ ಜನರಲ್ ಡಿಗಾಲ್, ಜನರಲ್ ಜಿರೋ ಇಬ್ಬರು ಒಂದು ಒಪ್ಪಂದಕ್ಕೆ ಬಂದರು. ಇದನ್ನು ನೋಡಿ ವಾರ್ಷಲ್ ಪಿಟೇನ್ ಲವಾಲ್ ಇವರಿಗೆ ಭೀತಿಯಾಗಿದೆ.

ಕಮ್ಮಿ ಬೆಲೆಯ ಬಟ್ಟೆಯ ತಯಾರಿಕೆ ವಿಷಯದಲ್ಲಿ ಸರ್ಕಾರಕ್ಕೂ ಮಿಲ್‌ಯಜಮಾನರಿಗೂ ಒಪ್ಪಂಡವಾಗಿ ಇನ್ನು 6 ತಿಂಗಳಲ್ಲಿ 1 ಸಾವಿರ ಮಿಲಿಯರ್ಡ್ ಗಜ ಬಟ್ಟೆಯನ್ನು ತಯಾರುಮಾಡಿ ಮಾರುವರಮ.

ರೇಗಾದಲ್ಲಿದ್ದ 1000 ಜನರನ್ನು ಜರ್ಮನಿಯವರು ಗಲ್ಲಿಗೇರಿಸಿದರಂದು ತಿಳಿಯಬಂದಿದೆ.

ನೀಗ್ರೋ ವಿಮಾನಕಾರರು ಇಟ್ಟಲ್ಲಿ ಆಕ್ಸಿಸ್ಸರ ಮೇಲೆ ಧಾಳಿ ನಡೆಸುವರಂತೆ. ಈಗಲಾದರೂ ನೀಗ್ರೋ ಜನರು ಕಣ್ಣಿಗೆ ಬಿದ್ದರಲ್ಲಾ!

ಮೇ ತಿಂಗಳಲ್ಲಿ ಬ್ರಿಟಿಷ್ ವಿಮಾನಗಳು ಜರ್ಮನಿಯಮೇಲೆ 12,500 ಟನ್ ಸಿಡಿಮದ್ದನ್ನು ಹಾಕಿ ಧಾಳಿ ಮಾಡಿದವು.

ನೀಲಗಿರಿ ಮತ್ತು ಅಪರ ಸತ್ಯಮುತ್ತ ಇರತಕ್ಕವರಿಗೆ ಅನುಕೂಲವಾಗುವಂತೆ ಕರಾಚಿಯಿಂದ ಗೋಧಿ ಮತ್ತು ಗೋಧಿ ಹಿಟ್ಟು ರವಾನೆಯಾಗಿದೆ.

ರಷ್ಯಾದಲ್ಲಿ ಯಾರ ಶಕ್ತಿ ಅಂತರಕ್ನದಲ್ಲಿ ಹೆಚ್ಚೆಂದು ತಿಳಿಯಲು ರಷ್ಯನರೂ ಜರ್ಮನರೂ ಅಗಾಧ ವಿಮಾನಗಳನ್ನು ಜಮಾಯಿಸುತ್ತಿರುವರು.

ಕೊಚ್ಚಿನ್ ಸರಕಾರದವರು ಇನ್ನು ಮುಂದೆ ಪ್ರಿಂಟು ಮಾಡುವ ಪಾಠಶಾಲೆಯ ಪುಸ್ತಕದ ಬೆಲೆಯನ್ನು ಶೇಕಡ 30 ರಂತೆ ಹೆಚ್ಚಿಸಲು ಅನುಮತಿ ಕೊಟ್ಟಿದಾರೆ

ಮಿ|| ರೂಸ್ವೆಲ್ಟರೂ ಮಿ | ಚರ್ಚಿಲರೂ ಮಾತುಕತೆ ನಡೆಸಿದ ಫಲವಾಗಿ ಇನ್ನು ಮುಂದೆ ಜಪಾನಿನ ಮೇಲೆ ಹೂಡುವ ಯುದ್ಧದಲ್ಲಿ ಭಾರತವು ಪ್ರಮುಖ ಪಾತ್ರ ವಹಿಸುವುದೆಂದು ಅಮೇರಿಕನ್ನರು ಅಭಿಪ್ರಾಯ ಪಡುತ್ತಾರೆ.

ಈಜೆಗೆ ಜರ್ಮನ್ ಸಬ್ ಮೆರೀನಿನ ಹಾವಳಿ ಕಮ್ಮಿಯಾಗಿ, ಹಡಗುಗಳು ಮುಳುಗುವುದು ಕಮ್ಮಿಯಾಗಿದೆಯಷ್ಟೆ. ಹೀಗೆ ಸುಮ್ಮಸಿರುವುದನ್ನು ನೋಡಿದರೆ ಜೂನ್‌ನಲ್ಲಿ ಯಾವಾಗಲೋ ಒಂದು ದೊಡ್ಡ ಸ್ಥಳಯವಾಗುವಹಾಗಿದೆ ಎಂದು ಅಮೆರಿಕ ನೌಕೆಯ ಸೆಕ್ರಟರಿ ಕರ್ನಲ್ ನಾಕ್ಸ್‌ರವರು ಹೇಳುತ್ತಾರೆ.

ಭಾರತದಿಂದ 25 ಮಂದಿ ವೈಮಾನಿಮಾನಿಕರು ಫೈಟರ್ ವಿಮಾನ ಶಿಕ್ಷಣ ಪಡೆಯಲು ಇಂಗ್ಲೆಂಡಿಗೆ ಹೊರಟಿರುವರು ಅಲ್ಲದೆ 25 ಮಂದಿ ಕೆನಡಾಕ್ಕೆ ಹೋಗಿ ಅಲ್ಲಿ ವಿಮಾನ ಶಿಕ್ಷಣ ಪಡೆದು, ಅಲ್ಲಿಂದ ಫೈಟರ್ ವಿಮಾನ ಶಿಕ್ಷಣವನ್ನು ಪಡೆಯಲು ಇಂಗ್ಲೆಂಡಿಗೆ ಬರುವರು

ಆರ್ಜೆಂಟೈನಾದ ಮಂತ್ರಿಮಂಡಲವು ರಾಜೀನಾಮೆ ಕೊಟ್ಟು ಲಾಪ್ಲಾಟಾಕ್ಕೆ ಹೋದರು. ಗಲಭೆಗೆ ಕಾರಣವಿಲ್ಲ. ಎಲ್ಲಾ ಶಾಂತ ಸ್ಥಿತಿಯಲ್ಲಿದೆ. ಹೊಸ ರಾಜ್ಯಾಂಗದಿಂದ ಸ್ಪೇನಿನ ಸ್ನೇಹಭಾವಕ್ಕೆ ಕಂದಕಬರಬಹುದು, ವಿಶ್ವ ಆಕ್ಸಿಸ್ಸ್ ರೊಡನೆ ಸ್ನೇಹಭಾವ ತ್ಯಜಿಸಬಹುದು

ಆಫ್ರಿಕಾ ಯುದ್ಧಕ್ಕೆ ಭಾರತದ ಸಹಾಯ

ಉತ್ತರ ಆಫ್ರಿಕಾ ಯುದ್ಧದ ಮೊದಲು ಎರಡೂವರೆ ವರ್ಷದಲ್ಲಿ ಭರತದಿಂದ ಆಹಾರ ಸಾಮಗ್ರಿಗಳೆಲ್ಲವೂ ಬಂದವು ಅಲ್ಲದೆ ಮುಸೋಲಿನಿಯ ಆಫ್ರಿಕಾ ಸಾಂಬ್ರಾಜ್ಯವು ನಾಶವಾಗುವುದಕ್ಕೂ ಭಾರತದ ಸೇನೆಯು ಕಾರಣವು. ಭಾರತದ ಕಾನ್ಪಾಯಿ ಹಡಗುಗಳಲ್ಲೇ ಒಂದೂವರೆ ಮಿಲಿಯರ್ಡ್ ಟನ್ ಆಹಾರ ಪದಾರ್ಥಗಳು ಸಾಗಿವೆ. ಅಮೇರಿಕಾ ಸಹಾಯ ಒದಗುವುದಕ್ಕಿಂತ ಮುಂಚೆ, ಮಿತ್ರಸೇನೆಗಳಿಗೆ ಬೇಕಾದ ಎಲ್ಲಾ ಸಾಮಗ್ರಿಗಳೂ ಭಾರತದಿಂದಲೇ ಬರಬೇಕಾಗಿತ್ತು. ಭಾರತವು ಉತ್ತರ ಆಫ್ರಿಕಾ ರಣರಂಗಕ್ಕೆ ಕಳುಹಿಸದಿದ್ದಿದ್ದರೆ, ರಷ್ಯಾಕ್ಕೆ ಮಿತ್ರರು ಸರಬರಾಜು ಮಾಡಲು ಬಹಳ ತೊಂದರೆಯಾಗುತ್ತಿತ್ತು. ಈ ವಿಷಯದಲ್ಲಿ ಭಾರತವು ಬಹಳ ಸಹಾಯಮಾಡಿದೆ.

ಭಾರತದ ಉಕ್ಕಿನಿಂದ, ಉಕ್ಕಿನ ಗುಡಿಸಲು ಮನೆ ಗ್ಯಾರೇಜ್ ಆಸ್ಪತ್ರೆ ಏರ್‌ಪ್ಲೇನು ನಿಲ್ದಾಣ ಇನೆಲ್ಲಾ ಕಟ್ಟಲ್ಪಟ್ಟವು. ಒಂದು ಸಾವಿರ ಎಕರೆಗೆ ಬೇಕಾದಷ್ಟು ಉಕ್ಕು ಬಂದಿತು; ಸಾವಿರಾರು ಮೈಲಿ ಕುಡಿಯುವ ನೀರನ್ನು ಒದಗಿಸಲು ಭಾರತದ ಉಕ್ಕಿನ ನಲ್ಲಿಗಳನ್ನು ಭಾರತದ ಇಂಜಿನಿಯರುಗಳು ಸೇನೆ ಹೋದಂತೆ ರೈಲ್ವೇ ಲೈನುಗಳನ್ನು ಜೋಡಿಸಿದರು.

ಮೆಡಿಟರೇನಿಯನ್ನಿಂದ ಟುಬ್ರೂಕಿಗೆ ರೈಲ್ವೆಯನ್ನು ನಿರ್ಮಾಣ ಮಾಡಿದವರು ಭಾರತೀಯರು. ಭಾರತೀಯರು ತಯಾರಿಸಿದ ವಿದ್ಯುತ್ತಂತಿ, ವಿದ್ಯುತ್ ಬೀಸಣಿಗೆ, ನೀರಿನ ಪಂಪು, ಬ್ಯಾಟರಿ ಇತ್ಯಾದಿಗಳು ಹಿಸಲಾಯಿತು. ಬ್ರಿಟನ್ನಿನಿಂದ ಇವನ್ನು ತರಿಸಲು ಸುತ್ತಿ ಬರಲು ಸಾವಕಾಶವಾಗುತ್ತಿತ್ತು. ಭಾರತದಿಂದ ಆರ್. ಎ. ಎಫ್. ವಿಮಾನಗಳಿಗೆ 5 ಮಿಲಿಯ ಸೆಲ್‌ಗಳು ಕಳುಹಿಸಲಾಗಿದೆ ಬ್ಯಾಟರಿ ಲಿಖ್ಖಿ ಹೇಳುವುದು ಬಹಳ ಕಷ್ಟವಾಗುವುದು. ಯುಪಟ್ರೆಯ್ ರಣರಂಗದಲ್ಲಿ ಉಪಯೋಗಿಸಿದ ಬಂದೂಕುಗಳೂ ಭಾರತದಲ್ಲಿ ತಯಾರಾದ್ದುವು — ಹೀಗೆಂದು ಅಮೇರಿಕಾ ಯುದ್ಧ ಕಛೇರಿಯವರು ಪ್ರಕಟಿಸಿರುತ್ತಾರೆ.

—o—

ದೇಶಾಭಿಮಾನ ಸ್ವಾಭಿಮಾನ

ಇವುಗಳಿಂದಲೂ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯು

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಹೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,

ಮೈಸೂರು ಸರ್ಕಾರದ ಜೀವವಿಮೆ ಇಲಾಖೆ

ಬೆಂಗಳೂರು.

New Opera Talkies — Aryamala

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ

ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಆರ್ಯಮಾಲಾ

ತಮಿಳು ಚಿತ್ರ

5th Week ನೇ ವಾರ

Ranjit — — Satyabhama

ರಣಜಿತ್ ಟಾಕೀಸ್

2nd Week ವೈವಿರಾವ್, ಪುಷ್ಪವಲ್ಲಿ ಪಾತ್ರವಹಿಸಿರುವ

ಸತ್ಯಭಾಮಾ [ತೆಲುಗು]

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ OR [Violinist]

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

T.G. ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಹಿಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, **ಮದರಾಸು.**

ಮೈಸೂರು ವೈದ್ಯಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲುಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿಗ ವಾರ್ಷಿಕ ಚಂದಾ ರೂ. 3—0—0

ಬಿಡಿ ಪ್ರತಿ 4 ಆಣೆ.

ಹಿಕ್‌ಬಾಥಮ್ಸ್ ಥೈಲ್ವೆ ಬುಕ್‌ಸ್ಟಾಲ್ ನಲ್ಲಿಯೂ ಪತ್ರಿಕೆಯು ತೋರೆಯುತ್ತೆ.

ಕಾರ್ಯಾಲಯ;

ಶ್ರೀ ವಾಸವಾಂಬ ಭವನ

ಅಶೋಕ ರಸ್ತೆ — ಮೈಸೂರು

For good printing

Saraswati PrintingPress

Lansdowne Buildings, Mysore

Lakshminarasimha Press

Srirampet, Mysore

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಅಕ್ಷಿಸುಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಲಭಿಸುವದು

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ